**ಸಾಕ್ಷಿಗೆ ದಿಃ 16.04.2025 ರಂದು ಪ್ರಮಾಣ ವಚನ ಭೋದಿಸಲಾಯಿತು**

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ ಬಿ ಸಿ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಶಪಥ ಪತ್ರದ ಮುಖಾಂತರ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ವಿಷಯಗಳು ಸರಿ ಇರುತ್ತದೆ. ದಿಃ12.02.2021 ರಂದು ನನ್ನ ತಂದೆ ಅಶ್ವಥನಾರಾಯಣ್ ರವರು ಬರೆದ ನೊಂದಾಯಿತ ಮೃತ್ಯು ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ–1 ಎಂದು ಗುರ್ತಿಸಲಾಯಿತು. ನನ್ನ ತಂದೆ ಅಶ್ವಥನಾರಾಯಣ್ ಇವರ ಮರಣ ಪ್ರಮಾಣ ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ–2 ಎಂದು ಗುರ್ತಿಸಲಾಯಿತು. ನನ್ನ ಮತ್ತು ಉಳಿದ ಅರ್ಜಿದಾರರ ಆಧಾರ್ ಕಾರ್ಡ್ ಗಳ ನಕಲುಗಳನ್ನು ನೋಡುತ್ತಿದ್ದು ಅವುಗಳನ್ನು ಕ್ರಮವಾಗಿ ನಿಪಿ–3 ರಿಂದ 7 ಎಂದು ಗುರ್ತಿಸಲಾಯಿತು. ಈ ಅರ್ಜಿಯನ್ನು ಸಲ್ಲಿಸಿದ ನಂತರ ಹೊಸ ದಿಗಂತ ದಿನಪತ್ರಿಕೆಯಲ್ಲಿ ನೀಡಿದ ಪೇಪರ್ ಪಬ್ಲಿಕೇಷನ್ ನೋಡುತ್ತಿದ್ದು ಅದನ್ನು ನಿಪಿ–8 ಎಂದು ಗುರ್ತಿಸಲಾಯಿತು.

**ಪಾಟೀ ಸವಾಲುಃ** ನಿಪಿ–8 ನೋಟಿಸಿನ ಪ್ರಕಾರ ಯಾವುದೇ ಎದುರುದಾರರು ಹಾಜರಾಗದೇ ಇದ್ದ ಕಾರಣ ಸಾಕ್ಷಿಯ ಪಾಟೀ ಸವಾಲು ಇರುವುದಿಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

(ಕೆ. ಗುರುಪ್ರಸಾದ್)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.